ದಿನಾಂಕ 16-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಆರ್.ಯು.ಪಿ ವಕೀಲರಿಂದಃ</u>**

ಇಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ನನ್ನನ್ನು ವಾದಿಯೇ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರಗಳನ್ನು ವಾದಿಯೇ ಮಾಹಿತಿ ನೀಡಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ವಕೀಲರು ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

2. ನನ್ನ ಜಮೀನಿನ ಸ ನಂಃ 118 ನೀರಲಗಿ ಗ್ರಾಮದಲ್ಲಿದೆ. ಅದು 3 ಎಕರೆ 22 ಗುಂಟೆ ವಿಸ್ತೀರ್ಣ ಇದೆ. ನನ್ನ ಜಮೀನಿಗೆ ಒಂದು ಎಕರೆಗೆ 10 ಲಕ್ಷ ಕಿಮ್ಮತ್ತು ಇದೆ. ಸ ನಂಃ 36 ರ ಜಮೀನಿಗೆ ಸಂಬಂಧಿಸಿದಂತೆ ನಾನು ಸಾಕ್ಷಿಯನ್ನು ನುಡಿಯುತ್ತಿದ್ದೇನೆ. ಸ ನಂಃ 36 ರ ಒಟ್ಟು ಕ್ಷೇತ್ರ 18 ಎಕರೆ 28 ಗುಂಟೆ ಇದೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಶೆಡ್ಯೂಲ್ ಆಸ್ತಿ ಮತ್ತು ನನ್ನ ಆಸ್ತಿ ಬೇರೆ ಬೇರೆ ಕಡೆ ಇವೆ. ದಾವಾ ಶೆಡ್ಯೂಲ್ ಆಸ್ತಿಯ ಪಕ್ಕದಲ್ಲಿ ವಾದಿಯ ಜಮೀನು ಇರುವುದಿಲ್ಲ. ವಾದಿಗೆ ಸೇರಿದ ಜಮೀನು ದಾವಾ ಶೆಡ್ಯೂಲ್ ಆಸ್ತಿಯಿಂದ ಸುಮಾರು ಒಂದು ಕಿ ಮೀ ದೂರದಲ್ಲಿ ಇದೆ. ವಾದಿಯ ಜಮೀನಿನ ಸ. ನಂಬರ್ ನನಗೆ ಗೊತ್ತಿಲ್ಲ. ವಾದಿಗೆ ಸುಮಾರು ಒಂದು ಎಕರೆ ಜಮೀನು ಇದೆ. ಆದರೆ ನನಗೆ ನಿರ್ಧಿಷ್ಟವಾಗಿ ಗೊತ್ತಿಲ್ಲ. ವಾದಿಯು ತನ್ನ ಜಮೀನಿನಲ್ಲಿ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ವಾದಿಯು ಜಮೀನಿನಲ್ಲಿ ಬೆಳೆಯನ್ನು ಬೆಳೆಯಲು ಕೆರೆಯ ನೀರಿನ ಸೌಲಭ್ಯವಿದೆ.

3. ಒಂದು ಎಕರೆ ಜಮೀನಿಗೆ ಖರ್ಚನ್ನು ಕಳೆದು ಭತ್ತದ ಫಸಲಿನಿಂದ ಒಂದು ಬೆಳೆಗೆ 10 ರಿಂದ 15 ಸಾವಿರ ಆದಾಯ ಬರುತ್ತದೆ. ನಾನು ಸಾಕ್ಷಿಯನ್ನು ಖರೀದಿ ಕರಾರಿಗೆ ಸಂಬಂಧಿಸಿದಂತೆ ಹೇಳಲು ಬಂದಿರುತ್ತೇನೆ. ಸ ನಂ: 36 ರ ಒಟ್ಟು ಕ್ಷೇತ್ರವಾದ 18 ಎಕರೆ 28 ಗುಂಟೆ ಜಮೀನಿನ ಪೈಕಿ 2 ಎಕರೆ 3 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರ ಆಗಿರುತ್ತದ ದಾವಾ ಆಸ್ತಿಯ ಒಟ್ಟು ಕ್ಷೇತ್ರವಾದ 18 ಎಕರೆ 25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನಗೆ ಚಕ್ಕುಬಂದಿ ಗೊತ್ತಿರುತ್ತದೆ. ಪೂ- ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಅಣ್ಣ ತಮ್ಮಂದಿರ ಆಸ್ತಿಗಳು ಇದ್ದು ನಿಖರವಾಗಿ ಯಾರಿಗೆ ಸೇರಿವೆ ಎಂದು ನನಗೆ ಗೊತ್ತಿಲ್ಲ. ಪ- ರಸ್ತೆ, ಉ- ಮಲ್ಲೇಶಪ್ಪ ಮಾವಿನಮರದ ರವರ ಆಸ್ತಿ ಮತ್ತು ದ- ಬಸವಣ್ಣೆಪ್ಪ ಉಳ್ಳಗಡ್ಡಿ ರವರ ಆಸ್ತಿಗಳು ಇವೆ.

4. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ದಿ: 01-04-1999 ರಂದು ಖರೀದಿ ಕರಾರು ಪತ್ರ ಆಗಿರುತ್ತದೆ. ದಾವಾ ಶೆಡ್ಯೂಲ್ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿ ಮತ್ತು ಆಕೆಯ ಸಹೋದರ ಮತ್ತು ಸಹೋದರಿಯರ ನಡುವೆ ದಾವೆ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಖರೀದಿ ವ್ಯವಹಾರವು ನೀಲಗಿರಿ ಗ್ರಾಮದಲ್ಲಿ ಇರುವ ವಾದಿಯ ಮನೆಯಲ್ಲಿಯೇ ಆಗಿರುತ್ತದೆ. ಖರೀದಿ ವ್ಯವಹಾರದಲ್ಲಿ ಇಬ್ಬರು ಭಾಗಿಯಾಗಿದ್ದೆವು. ಖರೀದಿ ಮಾತುಕತೆಯು ರೂ.55,000/- ಹಣಕ್ಕೆ ಆಗಿರುತ್ತದೆ. ಒಟ್ಟು ದಾವಾ ಆಸ್ತಿಗೆ ರೂ. 55,000/- ಹಣಕ್ಕೆ ಮಾತುಕತೆ ಆಗಿತ್ತು. ಖರೀದಿ ವ್ಯವಹಾರವನ್ನು ಖರ್ಜಗಿ ರವರು ಮುಗಿಸಿರುತ್ತಾರೆ. ಖರೀದಿ ಕರಾರು ಪತ್ರದ ಫಲವಾಗಿ ಮುಂಗಡ ಹಣವಾದ ರೂ.33,000/- ಗಳನ್ನು ಹಾನಗಲ್ಲನ ತಾಲೂಕು ಕಚೇರಿಯಲ್ಲಿ ಪ್ರತಿವಾದಿಗೆ ನೀಡಲಾಗಿತ್ತು. ತಾಲೂಕು ಕಚೇರಿಯಲ್ಲಿ ಮುಂಗಡ ಹಣವನ್ನು ನೀಡುವಾಗ ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಮುಂಗಡ ಹಣವನ್ನು ನೀಡುವಾಗ ಹಾನಗಲ್ಲನ ತಾಲೂಕು ಕಚೇರಿಯಲ್ಲಿ ನಾನು ಸಹ ಇದ್ದೆ. ಒಂದು ಸಾವಿರ ಮುಖ ಬೆಲೆಯ ಒಟ್ಟು 33

ನೋಟುಗಳನ್ನು ಮುಂಗಡ ಹಣವಾಗಿ ನೀಡಲಾಗಿತ್ತು. ಸದರಿ ಮುಂಗಡ ಹಣವನ್ನು ಸರೋಜಮ್ಮ ಎಂಬುವವರಿಗೆ ನೀಡಲಾಗಿತ್ತು. ಸಾಕ್ಷಿ ಮುಂದುವರೆದು ಮುಂಗಡ ಹಣವನ್ನು ಪಡೆದುಕೊಂಡ ಹೆಂಗಸಿನ ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

5. ದಾವಾ ಆಸ್ತಿಯ ಮಾಲೀಕರ ಹೆಸರು ನನಗೆ ನೆನಪಿಲ್ಲ. ಕಳೆದ 10 ವರ್ಷಗಳಿಂದ ನಾನು ನನ್ನ ಜಮೀನಿಗೆ ಹೋಗಲು ಬಿಟ್ಟಿರುತ್ತೇನೆ. ನನಗೆ ವಯಾಸ್ಸಾಗಿರುವುದರಿಂದ ಮನೆಯಲ್ಲಿಯೇ ಇರುತ್ತೇನೆ ಎಂದರೆ ಸರಿ. ನಾನು ಕಳೆದ 10 ವರ್ಷಗಳಿಂದ ಜಮೀನಿಗೆ ಹೋಗುವುದನ್ನು ನಿಲ್ಲಿಸಿರುವುದರಿಂದ ಯಾರು, ಯಾವ ಯಾವ ಜಮೀನಲ್ಲಿ ಯಾವ ಬೆಳೆಯನ್ನು ಬೆಳೆಯುತ್ತಾರೆ ಎಂದು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು ಯಾರು ವಹಿವಾಟು ಮಾಡುತ್ತಾರೆ ಎಂದು ನಾನು ನೋಡಿಲ್ಲ ಎಂದರೆ ಸರಿ.

6. ಖರೀದಿ ಕರಾರು ಪತ್ರವನ್ನು ದಸ್ತಾವೇಜು ಬರಹಗಾರರಾದ ಜಯಚಾರ್ ಎಂಬುವವರು ಬರೆದಿರುತ್ತಾರೆ. ಜಯಚಾರ್ ಎಂಬುವವರ ಸಂಪೂರ್ಣ ಹೆಸರು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿಯೂ ಸಹ ಜಯಚಾರ್ ಎಂದು ಬರೆಸಿದ್ದು ಆತನ ಸಂಪೂರ್ಣ ಹೆಸರನ್ನು ಬರೆಸಿಲ್ಲ ಎಂದರೆ ಸರಿ. ನಿ.ಪಿ-6 ರ ಖರೀದಿ ಕರಾರು ಪತ್ರಕ್ಕೆ ನಾನು, ಕರ್ಜಗಿ, ಬಸವಣ್ಣೆಪ್ಪ ರವರು ಸಹಿ ಮಾಡಿರುತ್ತೇವೆ. ಖರೀದಿ ಕರಾರು ಪತ್ರಕ್ಕೆ ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ದಾಖಲೆಗೆ ನಾನು ಸಹಿ ಮಾಡಿದ್ದು, ಯಾರು ಇತರರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೂರು ಮಂದಿ ಸಾಕ್ಷಿದಾರರನ್ನು ಹೊರತುಪಡಿಸಿ ಇತರರು ಸಹಿ ಮಾಡಿಲ್ಲ ಎಂದರೆ ಸರಿ.

7. ವಾದಿಯು ಗ್ರಾಮದಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಯು ಗ್ರಾಮದಲ್ಲಿ ರೈತರಿಗೆ ಗೊಬ್ಬರವನ್ನು ನೀಡುವುದು ಮತ್ತು ಹಣವನ್ನು ನೀಡುವ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ವಾದಿಯು ರಸಗೊಬ್ಬರವನ್ನು

ರೈತರಿಗೆ ನೀಡುವುದು, ಹಣವನ್ನು ಬಡ್ಡಿಗೆ ನೀಡುವುದು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಖಾಲಿ ಸ್ಟಾಂಪ ಪೇಪರ್ ಮೇಲೆ ಸಹಿಗಳನ್ನು ಪಡೆಯುವುದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ನನ್ನ ಸಮಕ್ಷಮ ನಾನು ಹೇಳುವಂತೆ ವಾದಿ ಮತ್ತು ಪ್ರತಿವಾದಿಗಳ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಸಂಚಕಾರ ಮತ್ತು ವ್ಯವಹಾರಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ಖರೀದಿ ಕರಾರು ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಹಣದ ವ್ಯವಹಾರಕ್ಕೆ ಸಂಬಂಧಿಸಿ ದಂತೆ ಭದ್ರತೆಗಾಗಿ ಖಾಲಿ ಸ್ಟಾಂಪ ಪೇಪರ್ ಮೇಲೆ ಸಹಿ ಮಾಡಿ ಕೊಟ್ಟಿದ್ದು ಅದನ್ನು ವಾದಿಯು ಖರೀದಿ ಕರಾರು ಪತ್ರವಾಗಿ ಮಾರ್ಪಡಿಸಿ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

9. ಗ್ರಾಮದಲ್ಲಿ ವಾದಿಯು ಹಲವರೊಂದಿಗೆ ಖರೀದಿ ವ್ಯವಹಾರಗಳನ್ನು ಮಾಡಿ ಅವುಗಳನ್ನು ಮಾರಾಟ ಮಾಡಿರುತ್ತಾರೆ. ವಾದಿಯು ಮಾಡುವ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ಮಾರಾಟ ಮಾಡಿದ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ವಾದಿಯು ತಾನು ಮಾರಾಟ ಮಾಡಿದ ಜಮೀನಿನ ಹಣವನ್ನು ದಾವಾ ಆಸ್ತಿಯನ್ನು ಖರೀದಿಸಲು ಉಪಯೋಗಿಸಿರುವ ಬಗ್ಗೆ ತಿಳಿದಿದ್ದು, ಇತರ ಖರೀದಿ ವ್ಯವಹಾರಗಳನ್ನು ಆತನು ಮಾಡಿರುವುದಿಲ್ಲ. ಖರೀದಿ ಕರಾರು ಪತ್ರವನ್ನು ವಾದಿ ಮತ್ತು ಪ್ರತಿವಾದಿಗಳು ನೋಂದಾಯಿಸಿರುವುದಿಲ್ಲ. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಸರಕಾರದ ಹಳೇ ಷರತ್ತಿನ ಬಗ್ಗೆ ನಮೂದು ಇದ್ದುದರಿಂದ ಖರೀದಿ ಕರಾರು ಪತ್ರವನ್ನು ನೋಂದಾಯಿಸಿಕೊಂಡಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತಹ ದಾಖಲೆಗಳನ್ನು ನಾನು ಖರೀದಿ ವ್ಯವಹಾರದ ಸಮಯದಲ್ಲಿ ನೋಡಿರುವುದಿಲ್ಲ. ನಾನು ಕಾಗದ ಪತ್ರಗಳನ್ನು ನೋಡದೇ ಇದ್ದ ಕಾರಣದಿಂದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವ

ತೊಂದರೆಗಳು ಇದ್ದವು ಎಂದು ನಾನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಹೇಳಿದ್ದರು ಎಂದು ನುಡಿಯುತ್ತಾರೆ.

10. ಪ್ರತಿವಾದಿಯು ಕಾಲ್ವೇ ಕಲ್ಲಾಪುರ ಗ್ರಾಮದ ವಾಸಿ. ಖರೀದಿ ವ್ಯವಹಾರದಲ್ಲಿ ಪ್ರತಿವಾದಿಯ ಗ್ರಾಮದವರು ಯಾರೂ ಇರಲಿಲ್ಲ. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಖರೀದಿ ಕರಾರು ಪತ್ರ ಆಗಿರುವುದಿಲ್ಲ, ವಾದಿಯು ಸೃಷ್ಟಿಸಿಕೊಂಡ ಖರೀದಿ ಕರಾರು ಪತ್ರಕ್ಕೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯೇ ಪೂರ್ವಜರ ಕಾಲದಿಂದಲೂ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ವಾದಿಯೇ ಸಾಗುವಳಿ ಮಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಆಸ್ತಿಯನ್ನು ವಾದಿಯು ಎಂದಿಗೂ ವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯನ್ನು ಪ್ರತಿವಾದಿಯೇ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಇರಬಹುದು.

11. ಪ್ರತಿವಾದಿ ಮತ್ತು ಆಕೆಯ ಕುಟುಂಬದವರ ಬಗ್ಗೆ ನನಗೆ ಪರಿಚಯ ಇಲ್ಲ. ಆಕೆಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಪ್ರತಿವಾದಿಯ ಗಂಡ ಜೀವಿತ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸ ನಂಃ 36 ರ ಜಮೀನಿನಲ್ಲಿ ಇರುವ ಒಟ್ಟು ವಿಸ್ತೀರ್ಣ 18 ಎಕರೆ 25 ಗುಂಟೆಯಲ್ಲಿ ಯಾರು ಯಾರು ಮಾಲೀಕರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಖರೀದಿ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಯಾವುದೇ ಮೋಸದ ವ್ಯವಹಾರಗಳು ಆದಾಗ ನಾನು ಊರಿನ ಹಿರಿಯವನು ಇರುವುದರಿಂದ ನನ್ನನ್ನು ಮಧ್ಯಸ್ಥಿಕೆ ವಹಿಸಿಕೊಂಡು ಸುಳ್ಳು ಸಾಕ್ಷಿ ಹೇಳಲು ಕರೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯೊಂದಿಗೆ ಮಿಲಾಪಿಯಾಗಿ ಆತನಿಗೆ ಪ್ರಚೋದನೆ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಆತನಿಗೆ

ಸಹಾಯ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರವನ್ನು ಬರೆದುಕೊಡಲು ಪ್ರತಿವಾದಿಗೆ ಯಾವುದೇ ಕಾರಣಗಳು ಇರಲಿಲ್ಲ ಮತ್ತುಪ್ರಸಂಗವು ಬಂದಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ